ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ

ಫೌಜುದಾರಿ ಪ್ರಕರಣ ಸಂಖ್ಯೆ : 557/2024

ಚಾ.ಸಾಃ 1, ಪ್ರಾ.ಸಾಃ 1

ಸಾಕ್ಷಿದಾರನ ಹೆಸರು	ಅಣ್ಣಪ್ಪ ಶೇಟ್
ತಂದೆಯ ಹೆಸರು	ಪ್ರಭಾಕರ ಶೇಟ್
ವಯಸ್ಸು	34 ವರ್ಷಗಳು
ಉದ್ಯೋಗ	ಅಕ್ಕಸಾಲಿಗ
ವಾಸ್ತವ್ಯ	ಮಾವಿನಕಟ್ಟಾ ಮಂಕಿ, ತಾಃ ಹೊನ್ನಾವರ

ಸಾಕ್ಷಿಯನ್ನು ದಿನಾಂಕಃ 08-01-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಎಪಿಪಿಯವರಿಂದ,

ಚಾಸಾ-13 ನನ್ನ ಬಾವ. ಕಳೆದ 7 ವರ್ಷಗಳಿಂದ ಮಂಕಿಯಲ್ಲಿ ಶ್ರೀ ಕಾಮಾಕ್ಷಿ ಜ್ಯುವೆಲರ್ಸ ಎಂಬ ಬಂಗಾರದ ಅಂಗಡಿಯನ್ನು ನಮ್ಮ ಬಾವ ಇಟ್ಟುಕೊಂಡಿದ್ದಾರೆ. ನಾನು ಸದರಿ ಅಂಗಡಿಯ ವಹಿವಾಟನ್ನು ನೋಡಿಕೊಳ್ಳುತ್ತೇನೆ. ನಮ್ಮ ಬಾವ ಆಗಾಗ ಅಂಗಡಿಗೆ ಬಂದು ಹೋಗುತ್ತಾರೆ.

ದಿನಾಂಕ 29-04-2024 ರಂದು ರಾತ್ರಿ 08-30 ರ ಸಮಯಕ್ಕೆ ಪ್ರತಿನಿತ್ಯದಂತೆ ಬಂಗಾರದ ಅಂಗಡಿಯನ್ನು ಬಾಗಿಲು ಹಾಕಿಕೊಂಡು ಹೋಗಿದ್ದೆ. ಮರುದಿನ ಬೆಳಿಗ್ಗೆ 06-30 ಕ್ಕೆ ಅಂಗಡಿಗೆ ಬಂದು ನೋಡಿದಾಗ ಅಂಗಡಿಯ ಶಟ್ರಸ್ ಬೀಗ ಮುರಿದಿತ್ತು. ಅನುಮಾನ ಬಂದು ಅಂಗಡಿ ಒಳಗೆ ಹೋಗಿ ನೋಡಿದಾಗ ಬೆಳ್ಳಿ ಬಂಗಾರದ ಆಭರಣಗಳ ಕಳ್ಳತನ ಆಗಿರುವಂತೆ ಕಂಡುಬಂದಿರುತ್ತದೆ. ಅಂಗಡಿಯನ್ನು ನೋಡಿದಾಗ ಅಂಗಡಿಯಲ್ಲಿದ್ದ ಬಂಗಾರದ ಮೂಗುತಿಗಳು, ಕಿವಿಯೋಲೆಗಳು, ನೆಕ್ಲೇಸ್, ಚಿಕ್ಕ ಮಕ್ಕಳ ಉಂಗುರಗಳು, ಕರಿಮಣಿ ಮತ್ತು ಲಾಕೆಟಗಳು ಹಾಗೂ ಕರಗಿಸಿ ಇಟ್ಟಿದ್ದ ಗಟ್ಟಿ ಒಟ್ಟೂ ಎಲ್ಲಾ ಸೇರಿ ಸುಮಾರು 296 ಗ್ರಾಂ ತೂಕದ ಬಂಗಾರದ ಆಭರಣಗಳು ಹಾಗೂ ಬೆಳ್ಳಿ ಕಾಲುಂಗುರ, ಬೆಳ್ಳಿಯ ಕಾಲುಗೆಜ್ಜೆಗಳು, ಚಂಬು, ದೀಪಗಳು, ಹಳೆ ಬೆಳ್ಳಿಗಳು ಸೇರಿ ಒಟ್ಟೂ 22 ಕೆ.ಜಿಯಷ್ಟು ಬೆಳ್ಳಿಯ ಆಭರಣಗಳು ಕಳುವಾಗಿರುವುದು ಕಂಡುಬಂದಿರುತ್ತದೆ. ತಕ್ಷಣ ನಾನು ಬಾವನಿಗೆ ಫೋನ್ ಮಾಡಿ ವಿಚಾರ ತಿಳಿಸಿರುತ್ತೇನೆ. ನಂತರ ಅವರು ಅಂಗಡಿಗೆ ಬಂದಿದ್ದು ನಾನು ಮತ್ತು ನನ್ನ ಬಾವ ಪೋಲೀಸ್ ಠಾಣೆಗೆ ಹೋಗಿ ಬೆಳ್ಳಿ ಮತ್ತು ಬಂಗಾರ ಕಳ್ಳತನ ಆಗಿರುವ ಬಗ್ಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡುತ್ತಿದ್ದು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೋಲೀಸರು ಕಾರವಾರದ ಶ್ವಾನದಳ, ಬೆರಳು ಮುದ್ರೆ ತಜ್ಞರು ಅಂಗಡಿಗೆ ಬಂದಿರುತ್ತಾರೆ. ನಂತರ ಪೋಲೀಸರು ಸ್ಥಳ ಪರಿಶೀಲನೆ ಮಾಡಿ ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ. ಬೆರಳಚ್ಚು ತಜ್ಞರು ಸ್ಥಳದಲ್ಲಿ ಸಿಕ್ಕಿದ್ದ ಬೆರಳು ಮುದ್ರೆಗಳನ್ನು ಸಂಗ್ರಹಿಸಿರುತ್ತಾರೆ. ಶ್ವಾನವು ಅಂಗಡಿಯಿಂದ ಹೊರಟು ಮೀನು ಮಾರುಕಟ್ಟೆಯವರೆಗೆ ಹೋಯಿತು, ನಂತರ ಅಲ್ಲಿಂದ ಪೆಟ್ರೋಲ್ ಬಂಕ್ ತನಕ ಹೋಯಿತು ನಂತರ ವಾಪಸ್ಸು ಬಂದಿರುತ್ತದೆ. ಪಂಚನಾಮೆಯ ಕಾಲಕ್ಕೆ ಯಾವ ಯಾವ

ಜಾಗದಲ್ಲಿ ಒಡವೆಗಳನ್ನು ಇಟ್ಟಿರುತ್ತೇವೆ ಎಂಬುದನ್ನು ವಿವರವಾಗಿ ಪೋಲೀಸರಿಗೆ ತಿಳಿಸಿರುತ್ತೇವೆ. ಪೋಲೀಸರು ಸ್ಥಳದಲ್ಲಿ ಫೋಟೋ ತೆಗೆದು ಕಚ್ಚಾ ನಕಾಶೆ ತಯಾರಿಸಿ, ಪಂಚನಾಮೆ ಮತ್ತು ಕಚ್ಚಾ ನಕಾಶೆಗೆ ನಮ್ಮ ಸಹಿ ತೆಗೆದುಕೊಂಡಿರುತ್ತಾರೆ. ಸ್ಥಳ ಪಂಚನಾಮೆಯನ್ನು ಈಗ ನೋಡುತ್ತಿದ್ದು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಅಂಗಡಿಯ ಕಚ್ಚಾ ನಕಾಶೆಯನ್ನು ನೋಡುತ್ತಿದ್ದು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ 2 ಫೋಟೋಗಳನ್ನು ನೋಡುತ್ತಿದ್ದು ನಿಪಿ-4 ಎಂದು ಗುರುತಿಸಲಾಯಿತು.

(ಕೋರಿಕೆ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ